ಅಳುಕಿನಿಂದಲೇ ಬಸ್ಸು ನಿಲ್ದಾಣಕ್ಕೆ ಬಂದು ನಿಂತರು. ಅವರ ಸಹಾಯಕ್ಕೆ ವರ್ಷ ಕೂಡ ನಿಂತಳು. ಎಷ್ಟೋ ಹೊತ್ತಾದ ಮೇಲೆ ಒಂದು ಮಗು 'ಕೇಸರಿಬಾತು ಬೇಕು' ಅಂತ ತಗೊಂಡು ತನ್ನ ಅಮ್ಮನಿಂದ ದುಡ್ಡು ಕೊಡಿಸಿತು. ಮೊದಲ ಸಂಪಾದನೆ ನೋಡಿ ಆನಂದದಿಂದ ಚಂದ್ರಿಕ ಕಣ್ಣಲ್ಲಿ ನೀರು ಬಂದಿತು. 'ಆಂಟಿ, ಕೇಸರಿಬಾತು ತುಂಬಾನೇ ಚೆನ್ನಾಗಿತ್ತು' ಅಂತ ಮಗು ಹೇಳಿದಾಗ ಖುಷಿಯಾಗಿ ಚೇತನ ಮತ್ತೊಂದು ಪ್ಲೇಟ್ ಕೇಸರಿಬಾತನ್ನು ಆ ಮಗುವಿಗೆ ನೀಡಿ 'ತಿನ್ನು ಮಗು' ಅಂತ ಪ್ರೀತಿಯಿಂದ ನೀಡಿದಳು. ಜನ ಒಬ್ಬೊಬ್ಬರಾಗಿ ಬಂದು ತಿನ್ನತೊಡಗಿದಾಗ ಮೊದಲ ದಿನವೇ ಭರವಸೆ ಮೂಡಿತು. ಹನ್ನೆರಡು ಗಂಟೆಯೊಳಗೆ ತಂದಿದ್ದ ತಿಂಡಿಯೆಲ್ಲವೂ ಮುಗಿದುಹೋಯಿತು. ರುಚಿಯಾಗಿ, ಶುಚಿಯಾಗಿ ಕೊಟ್ಟರೆ ಜನ ಸ್ವೀಕರಿಸುತ್ತಾರೆ ಅನ್ನೋ ಸತ್ಯ ಗೊತ್ತಾಯಿತು ಅವರಿಗೆ. ಮಾರನೇ ದಿನ ತಿಂಡಿ ಜೊತೆ ಮಧ್ಯಾಹ್ನದ ಊಟ ಕೂಡಾ ತಂದರು. ವಾರದೊಳಗೆ ಇವರು ಕೊಡುತ್ತಿದ್ದ ಊಟದ ರುಚಿಗೆ ಜನ ಮನಸೋತರು. ಇಲ್ಲಿ ಊಟ ತಿಂಡಿ ತಿಂದ ಜನ ಒಬ್ಬರಿಂದ ಮತ್ತೊಬ್ಬರಿಗೆ ಹೇಳಿಕೊಂಡು ಬಂದರು. ಕ್ರಮೇಣ ಸುತ್ತಮುತ್ತ ಇಲ್ಲಿ ಊಟ ತಿಂಡಿ ಚೆನ್ನಾಗಿರುತ್ತದೆ ಅಂತ ವಿಷಯ ಹರಡಿತು.

ಕಡಿಮೆ ಹಣಕ್ಕೆ ರುಚಿಯಾದ, ಶುಚಿಯಾದ ಊಟ ತಿಂಡಿ ಸಿಕ್ಕರೆ ಜನ ಬಿಡುವರೆ... ಮನೆಯಿಂದ ಅಡುಗೆ ಮಾಡಿ ತರುವುದು ಕಷ್ಟ ಅಂತ ಅನ್ನಿಸಿ ಚಿಕ್ಕದಾಗಿ ಒಂದು ಹೋಟೆಲ್ ಬಾಡಿಗೆಗೆ ಪಡೆದರೆ, ಅಂಬಿಕ, ಪಂಕಜ ಕಾಯಂ ಆಗಿ ಅಡುಗೆ ಮಾಡಲು ಒಪ್ಪಿಕೊಂಡರು. ಹೋಟೆಲ್ ನಡೆಸಲು ಬೇಕಾದ ಬಂಡವಾಳ ಅವರ ಬಳಿ ಇಲ್ಲ, ಎಲ್ಲಿಂದ ಅದಕ್ಕೆ ಬೇಕಾದ ಹಣ ತರುವುದು ಅನ್ನೋ ಚಿಂತೆಯಲ್ಲಿ ಇರುವಾಗಲೇ, ವರ್ಷ ತಾನು ಈಗಾಗಲೇ ಅಂಗಡಿ ಮಳಿಗೆ ಬಾಡಿಗೆಗೆ ತೆಗೆದುಕೊಂಡಿರುವುದಾಗಿಯೂ, ಮಳಿಗೆ ಉದ್ದವಾಗಿರುವುದರಿಂದ, ಅದೇ ಮಳಿಗೆಯಲ್ಲಿ ಎರಡು ಭಾಗ ಮಾಡಿ, ಮುಂದಿನ ಮಳಿಗೆಯಲ್ಲಿ ಹೋಟೆಲ್ ಮಾಡುವುದು, ಹಿಂದಿನ ಭಾಗದಲ್ಲಿ ಮಿಷನ್ ಇಟ್ಟುಕೊಂಡು ಬಟ್ಟೆ ಹೊಲಿಯುವುದಾಗಿ ಹೇಳಿದಾಗ ಎಲ್ಲರೂ ಖುಷಿಪಟ್ಟರು. ಸದ್ಯಕ್ಕೆ ಒಂದು ಸಮಸ್ಯೆ ಪರಿಹಾರ ಕಂಡಿತ್ತು. ಅವರಿಗೆಲ್ಲ ಮಾನವಂತರಾಗಿ ದುಡಿದು ತಿನ್ನುವಲ್ಲಿ ಎಂತಹ ಸುಖವಿದೆ ಅನ್ನೋ ಸತ್ಯ ಅರ್ಥವಾಗಿ ಹೋಯಿತು. ಭಿಕ್ಷೆ ಬೇಡಿ, ಅವರಿವರಿಗೆ ಸೆರಗು ಹಾಸಿ, ಎಲ್ಲರಿಂದ ಛೀ ಥೂ ಅಂತ ಅನ್ನಿಸಿಕೊಂಡು ಭಂಡಬಾಳು ಬದುಕುವುದಕ್ಕಿಂತ, ಪೊಲೀಸರಿಂದ ಸದಾ ತಪ್ಪಿಸಿಕೊಳ್ಳುತ್ತಾ, ಸಿಕ್ಕಿಕೊಂಡಾಗ ಅವರಿಂದ ಹೀನಾಯವಾಗಿ ಉಗಿಸಿಕೊಂಡು, ಶಿಕ್ಷೆ, ದಂಡ ಅಂತ ಅನುಭವಿಸಿ ಸಂಕಷ್ಟಪಡುವುದಕ್ಕಿಂತ ಈ ಸ್ವಾಭಿಮಾನದ ಬದುಕಿನಿಂದ ನಿಜಕ್ಕೂ ನೆಮ್ಮದಿ, ಸುಖ, ಸಂತೋಷ ಸಿಗುತ್ತದೆ ಅಂತ ಆ ಕ್ಷಣದಲ್ಲಿ ಅನಿಸಿಬಿಟ್ಟಿತು. ನಿಜವಾಗಿಯೂ ಇಂತಹ ಬದುಕು ತಮಗೆ ಬೇಕಿತ್ತು ಎನ್ನುವುದನ್ನು ಮನಗಂಡರು.

ಮಾರನೆ ದಿನವೇ ಚೇತನ, ಚಂದ್ರಿಕ, ತರಾನ ಮನೆಯಲ್ಲಿಯೇ ಅಡುಗೆ ಮಾಡಿಸಿಕೊಂಡು ತಳ್ಳೋ ಗಾಡಿಯಲ್ಲಿಟ್ಟುಕೊಂಡು ಹಿಂದಿನ ದಿನದಂತೆ ಬಂದು ವ್ಯಾಪಾರ ಶುರು ಮಾಡಿದರೆ, ವರ್ಷ ಪಂಕಜಳನ್ನು ಕರೆದುಕೊಂಡು ಹೋಟೆಲ್ಲಿಗೆ ಬೇಕಾದ ಸಾಮಾನು ತರಲು ತೀರ್ಮಾನಿಸಿದಳು. ಪಂಕಜಾಗೆ ಹೋಟೆಲಿಗೆ ಏನೇನು ಬೇಕು ಎಂಬ ಅಂದಾಜು ಇದ್ದುದರಿಂದ ಹೋಟೆಲಿಗೆ ಬೇಕಾದ ಪಾತ್ರೆ, ಸ್ಟವ್, ಟೇಬಲ್, ಕುರ್ಚಿ ಮುಂತಾದವುಗಳನ್ನು ಹೇಳಿದಂತೆ ವರ್ಷ ಲಿಸ್ಟ್ ಹಾಕಿದಳು. ಅದಕ್ಕೆ ಬೇಕಾದ ಬಜೆಟ್ ಜಾಸ್ತಿಯಾಗುತ್ತೇನೊ ಎಂಬ ಅನುಮಾನ ಕಾಡಿದಾಗ ವರ್ಷ ಗಂಭೀರಳಾದಳು. ವರ್ಷಳ ಮನಸ್ಸನ್ನು ಅರ್ಥ ಮಾಡಿಕೊಂಡ ಪಂಕಜ 'ವರ್ಷ ಚಿಂತೆ ಮಾಡಬೇಡ, ಹೋಟೆಲಿನ ಬಂಡವಾಳವನ್ನು ನಾವೆಲ್ಲ ಸೇರಿ ಹಾಕಿಕೊಳ್ಳುತ್ತೇವೆ. ನೀನು ಅಡ್ವಾನ್ಸ್, ಬಟ್ಟೆ ಹೊಲಿಯುವ ಮಿಷನ್‌ಗೆ ಹಣ ಹೊಂದಿಸಿಕೊ ಸಾಕು' ಅಂದಾಗ ವರ್ಷಳಿಗೆ ಸಮಾಧಾನ ಆಯಿತಾದರೂ, ಅಷ್ಟೊಂದು ಹಣ ನಿಮ್ಮ ಬಳಿ ಇದೆಯೇ ಅಂತ ಕೇಳಿದಳು. ಎಲ್ಲರೂ ಸ್ವಲ್ಪ ಸ್ವಲ್ಪ ಹಾಕಿಕೊಂಡರೆ ಆಗುತ್ತದೆ ವರ್ಷ, ಈಗ ಸದ್ಯಕ್ಕೆ ಏನು ಬೇಕೊ ಅದನ್ನು ತೆಗೆದುಕೊಳ್ಳೋಣ, ನಿಧಾನವಾಗಿ ಮಿಕ್ಕಿದ್ದನ್ನು ತೆಗೆದುಕೊಳ್ಳೋಣ. ಹೊಸದನ್ನು ತೆಗೆದುಕೊಳ್ಳುವ ಬದಲು ಸೆಕೆಂಡ್ಸ್ ಇದ್ದರೆ ನೋಡೋಣ. ಸಿಕ್ಕಿದರೆ ನಮಗೆ ಕಡಿಮೆ ಬೀಳುತ್ತದೆ' ಅನ್ನೋ ಸಲಹೆ ಕೂಡಾ ಪಂಕಜ ನೀಡಿದಳು. ಹೌದಲ್ಲವೇ ಇದು ನನಗೆ ಹೊಳೆದೇ ಇರಲಿಲ್ಲ, ಅವತ್ತೇ ಸೆಕೆಂಡ್ಸ್ ಸಿಗುವ ಕಡೆ ಹೋಗಿ ತಮಗೆ ಬೇಕಾದ ವಸ್ತುಗಳನ್ನು ಇರುವ ಹಣಕ್ಕೆ ಎಷ್ಟು ಬರುತ್ತದೆಯೊ ಅಷ್ಟು ಖರೀದಿಸಿ ಹೋಟೆಲಿಗೆ ತಂದು ಹಾಕಿಕೊಂಡರು. ನಾಲ್ಕು ಮಿಷನ್‌ಗಳನ್ನು, ಬಟ್ಟೆ, ದಾರ ಮುಂತಾದ ಅಗತ್ಯ ವಸ್ತುಗಳನ್ನು ವರ್ಷ ಖರೀದಿಸಿ ತಂದಳು. ಒಂದು ಒಳ್ಳೆಯ ದಿನ ನೋಡಿ ಹೋಟೆಲ್ ಮತ್ತು ಗಾರ್ಮೆಂಟ್ಸ್ ಪ್ರಾರಂಭ ಮಾಡಿದರು. ಸದ್ಯಕ್ಕೆ ಅಂಬಿಕ ಒಬ್ಬಳೇ ಬಟ್ಟೆ ಹೊಲಿಯಲು ಶುರು ಮಾಡಿದಳು. ಟೈಲರಿಂಗ್ ಬಗ್ಗೆ ಆಸಕ್ತಿ ಇದ್ದ ರಾಜಿ, ವಂದನ, ಮುಕ್ತಾಗೆ ಟೈಲರಿಂಗ್ ಕಲಿಸುತ್ತಾ ಅಂಬಿಕ ಮೊದಲು ಪೆಟಿಕೋಟ್‌ಗಳನ್ನು ಹೊಲಿದು ಕೊಡುತ್ತಿದ್ದಳು. ಅವುಗಳನ್ನು ವರ್ಷ ರೆಡಿಮೇಡ್ ಶಾಪ್‌ಗಳಿಗೆ ಕೊಡುವ ಕಾಯಕ ನಡೆಸಿದಳು.

ಮೊದಮೊದಲು ಅಂಗಡಿಯವರು ಇವಳತ್ತ ಕುಹಕವಾಗಿ ನೋಡುತ್ತಾ 'ನಮಗೆ ಬೇಡ, ಹೊರಟು ಹೋಗು' ಅಂತ ರೇಗಿ ಕಳಿಸಿ ಬಿಡುತ್ತಿದ್ದರು. ಆದರೆ ಅದರ ನಿರೀಕ್ಷೆ ಇದ್ದ ವರ್ಷ ಬೇಸರಿಸದೆ ಮರಳಿ ಯತ್ನವ ಮಾಡು ಅನ್ನುವಂತೆ ಬೇರೆ ಬೇರೆ ಅಂಗಡಿಗೆ ಹೋಗಿ ತಮ್ಮ ಬಟ್ಟೆಗಳನ್ನು ಕೊಳ್ಳುವಂತೆ ಮನವೊಲಿಸಲು ಪ್ರಯತ್ನ ನಡೆಸಿದಳು. ಒಂದು ಅಂಗಡಿಯವನು ಇವಳ ಗೋಗರೆತಕ್ಕೆ ಮನಕರಗಿ 'ಕೊಟ್ಟು ಹೋಗು, ವ್ಯಾಪಾರ ಆದರೆ ದುಡ್ಡು ಕೊಡುತ್ತೇನೆ, ಇಲ್ಲದಿದ್ದರೆ ವಾಪಸ್ ಕೊಡುತ್ತೇನೆ' ಅಂತ ಷರತ್ತಿನ ಮೇಲೆ ತೆಗೆದುಕೊಂಡಾಗ ಯುದ್ಧವನ್ನೇ ಜಯಿಸಿದಷ್ಟು ಖುಷಿಯಿಂದ ವರ್ಷ ಬೀಗಿದಳು. ಗೆದ್ದೇ ಗೆಲ್ಲುವೆ ಅನ್ನುವ ಭರವಸೆ ಮೂಡಿ ಗೆಲುವಾದಳು. ಪೆಟಿಕೋಟ್ ಜೊತೆಗೆ ಮಕ್ಕಳ ನವನವೀನ ಉಡುಪುಗಳನ್ನು ಹೊಲಿದು ಕೊಟ್ಟರೆ ತಮಗೆ ಹೆಚ್ಚು ಲಾಭ ಬರಬಹುದು ಅಂತ ಅಂದುಕೊಂಡು ಅದಕ್ಕೆ ಬೇಕಾದ ವಸ್ತುಗಳನ್ನು ತರಲು ಅಂಬಿಕಳನ್ನು ಕರೆದುಕೊಂಡು ಹೋಗಲು ನಿರ್ಧರಿಸಿದಳು. ಮಾರನೇ ದಿನವೇ ಅಂಬಿಕಳನ್ನು ಕರೆದುಕೊಂಡು ಹೋಗಿ ಮಕ್ಕಳ ಬಟ್ಟೆ ಹೊಲಿಯಲು ಬೇಕಾದ ಸಾಮಗ್ರಿಗಳನ್ನು ತಂದು ಬಟ್ಟೆಯ ಕ್ಯಾಟಲಾಗ್ ಕೂಡಾ ತಂದುಕೊಟ್ಟಳು. ಒಂದು ವಾರದಲ್ಲಿಯೇ ಹತ್ತು ಹಲವು ಡಿಸೈನಿನ ಬಟ್ಟೆ ಹೊಲಿದು ವರ್ಷಳ ಕೈಗಿಟ್ಟಳು. ವರ್ಷ ಪೆಟಿಕೋಟ್ ಕೊಟ್ಟು ಬಂದಿದ್ದ ಅಂಗಡಿಗೆ ಹೋಗಿ ತಾನು ಕೊಟ್ಟ ಬಟ್ಟೆಗಳ ಗತಿ ಏನಾಗಿದೆಯೊ ಅನ್ನೋ ಆತಂಕದಲ್ಲಿಯೇ ಅಂಗಡಿ ಒಳಗೆ ಕಾಲಿಟ್ಟಳು. ಅವಳನ್ನು ಕಂಡ ಕೂಡಲೇ 'ಬಂದ್ಯಾ, ನೀನು ಬರೋದನ್ನೇ ಕಾಯ್ತಾ ಇದ್ದೆ. ನೀನು ಕೊಟ್ಟ ಅಷ್ಟೂ ಪೆಟಿಕೋಟ್ ಮಾರಾಟವಾಗಿ ಹೋಗಿವೆ. ನನಗೆ ಇನ್ನಷ್ಟು ಬೇಕು, ತಂದು ಕೊಡು, ಎಲ್ಲಾ ಬಣ್ಣಗಳ ಹತ್ತು ಹತ್ತು ಪೀಸ್ ಬೇಕು. ಇನ್ನೊಂದು ವಾರದೊಳಗೆ ಬೇಕು, ಆಗುತ್ತಾ' ಅಂದಾಗ ವರ್ಷಳಿಗೆ ಕುಣಿದಾಡುವಂತಾಯಿತು.

'ಆಯ್ತು ಅಣ್ಣ, ಮುಂದಿನ ವಾರದೊಳಗೆ ನೀವು ಕೇಳಿದ್ದು ತಂದುಕೊಡುತ್ತೇನೆ. ಈಗ ಮಕ್ಕಳ ಬಟ್ಟೆ ತಂದಿದ್ದೇನೆ, ನೋಡಿ ಅಣ್ಣ' ಅಂದಾಗ ಹಿಂದಿನಂತೆ ನಿರ್ಲಕ್ಷ್ಯಮಾಡದೆ, 'ಕೊಡು ನೋಡೋಣ' ಎಂದ. ಅವಳು ತಂದಿದ್ದ ಬಟ್ಟೆಗಳನ್ನು ನೋಡಿ, 'ಚೆನ್ನಾಗಿದೆ... ಇವತ್ತಿನ ಟ್ರೆಂಡ್‌ಗೆ ಸರಿಯಾಗಿದೆ, ಕೊಡು' ಅಂತ ಸಂತೋಷವಾಗಿಯೇ ತೆಗೆದುಕೊಂಡು, ಪೆಟಿಕೋಟಿನ ಹಣದ ಜೊತೆಗೆ ಅಡ್ವಾನ್ಸ್ ಅಂತ ಮತ್ತಷ್ಟು ಹಣ ಕೊಟ್ಟಾಗ ವರ್ಷ ಖುಷಿ ತಡೆಯಲಾರದೆ ಅತ್ತೇ ಬಿಟ್ಟಳು. ಕಣ್ಣೀರು ಹರಿಸುತ್ತಲೆ ಅಂಗಡಿಯಾತನ ಕಾಲಿಗೆ ಬಿದ್ದು ನಮಿಸಿದಳು. 'ಏಳಮ್ಮ ನನ್ನ ಕಾಲಿಗೆ ಯಾಕೆ ಬೀಳ್ತಿಯಮ್ಮ, ಇದರಲ್ಲಿ ನನ್ನ ಸ್ವಾರ್ಥನೂ ಇದೆ. ನನಗೂ ಇದರಲ್ಲಿ ಲಾಭ ಇದೆ' ಅಂತ ಕಾಲಿಗೆ ಬಿದ್ದವಳನ್ನು ಏಳಿಸಿದ. ಅವಳು ತಂದಿದ್ದ ಮಕ್ಕಳ ಬಟ್ಟೆಯನ್ನು ಖುಷಿಯಿಂದಲೇ ತೆಗೆದುಕೊಂಡ. ಅಲ್ಲಿಂದ ಹೊರಟು ಅಂಗಡಿಯಾತ ಕೊಟ್ಟ ಹಣದಿಂದ ಪೆಟಿಕೋಟ್ ಹೊಲಿಯುವ ಎಲ್ಲ ಸಾಮಗ್ರಿಗಳನ್ನು ಕೊಂಡುಕೊಂಡು ತಮ್ಮ ಅಂಗಡಿಗೆ ಬಂದಳು. ಬಂದವಳೇ 'ಪೆಟಿಕೋಟಿಗೆ ಬೇಡಿಕೆ ಬಂದಿದೆ, ಬೇಗ ನೂರು ಪೆಟಿಕೋಟ್ ಹೊಲಿದುಕೊಡು' ಅಂದಾಗ ಒಬ್ಬಳೇ ಅಷ್ಟು ಬೇಗ ಹೊಲಿದು ಕೊಡುವುದು ಕಷ್ಟ ಅಂತ ಅನುಮಾನಿಸಿದಳು.

ಸಹಾಯಕ್ಕೆ ಬೇರೆಯವರನ್ನು ತೆಗೆದುಕೊಂಡರೆ ಅಂತ ವರ್ಷ ಸಲಹೆ ನೋಡಿದಳು. ನಮ್ಮಲ್ಲಿರುವವರಲ್ಲಿ ಯಾರಿಗಾದರೂ ಹೊಲಿಗೆ ಬರುತ್ತದೆಯೇ ಅಂತ ಕೇಳಿದಳು. 'ಗೊತ್ತಿಲ್ಲ, ಕೇಳಬೇಕು, ಹೊಲಿಗೆ ಬಂದರೂ ಇಲ್ಲಿಗೆ ಬರಲು ಮನಸ್ಸು ಮಾಡಬೇಕಲ್ಲ, ಮೊದಲೇ ಅವರಿಗೆ ನಾವು ಇಲ್ಲಿ ಕೆಲಸ ಮಾಡುವುದು ಇಷ್ಟವಿಲ್ಲ, ನೋಡೋಣ' ಅಂತ ಸದ್ಯಕ್ಕೆ ವಿರಾಮ ಹಾಕಿದಳು ಅಂಬಿಕ.

(ಸಶೇಷ)